# ಪತ್ರಿಕಾ ಪ್ರಕಟಣೆ

## ಮೋಟಾರ ಸೈಕಲಗಳು ಕಳ್ಳತನ ಮಾಡಿದ ಕಳ್ಳರ ಬಂಧನ

ಕಲಬುರಗಿ ನಗರದ ಸಬ್ ಅರ್ಬನ್ ಪೊಲೀಸ್ ಠಾಣೆಯ ವ್ಯಾಪ್ತಿಯಲ್ಲಿರುವ ತಾಜ ಸುಲ್ತಾನಪೂರ ರಸ್ತೆಗೆ ಇರುವ ಎ.ಪಿ.ಎಮ್.ಸಿ. ಮಾರುಕಟ್ಟೆಯಲ್ಲಿ ಮೋಟಾರ ಸೈಕಲಗಳು ಕಳ್ಳತನವಾದ ಬಗ್ಗೆ ಠಾಣೆಯಲ್ಲಿ ಪ್ರಕರಣ ದಾಖಲಾಗಿದ್ದು ಈ ಕುರಿತು ತನಿಖೆ ಕೈ ಕೊಂಡಿದ್ದು ಮಾನ್ಯ ಶ್ರೀ ವಾಯ್.ಎಸ್. ರವಿಕುಮಾರ, ಐ.ಪಿ.ಎಸ್. ಪೊಲೀಸ್ ಆಯುಕ್ತರು, ಮಾನ್ಯ ಶ್ರೀ ಅಡ್ಡೂರ ಶ್ರೀನಿವಾಸಲು, ಐ.ಪಿ.ಎಸ್, ಉಪ ಪೊಲೀಸ ಆಯುಕ್ತರು (ಕಾ.ಸು.), ಮಾನ್ಯ ಶ್ರೀ ಶ್ರೀಕಾಂತ ಕಟ್ಟಿಮನಿ ಉಪ ಪೊಲೀಸ ಆಯುಕ್ತರು (ಅಪರಾಧ ಮತ್ತು ಸಂಚಾರ), ಮಾನ್ಯ ಎ.ಸಿ.ಪಿ. ಶ್ರೀ ಜೆ. ಹೆಚ್. ಇನಾಮದಾರ ಸಬ್ ಅರ್ಬನ್ ಉಪವಿಭಾಗ ಕಲಬುರಗಿ ನಗರ ರವರ ಮಾರ್ಗದರ್ಶನದಲ್ಲಿ ಶ್ರೀ ಬಾಸು ಚವ್ಹಾಣ ಪಿ.ಐ. ಸಬ್ ಅರ್ಬನ್ ಪೊಲೀಸ ಠಾಣೆ ಕಲಬುರಗಿ ನಗರ ಇವರ ನೇತೃತ್ವದಲ್ಲಿ ಶ್ರೀ ಕವಿತಾ ಚವ್ಹಾಣ ಪಿ.ಎಸ್.ಐ. (ಕಾ.ಸು.), ಮತ್ತು ಸಿಬ್ಬಂದಿಯವರಾದ ಶ್ರೀ ರಾಜಕುಮಾರ, ಸಿರಾಜ ಪಟೇಲ, ಮಲ್ಲಿಕಾರ್ಜುನ, ನಾಗೇಂದ್ರ, ಪ್ರಕಾಶ ಅನೀಲ ಮತ್ತು ಅಂಬಾಜಿ ಇವರು ಕಲಬುರಗಿ ನಗರದ ತಾಜ ಸುಲ್ತಾನಪೂರ ರಸ್ತೆಗೆ ಇರುವ ಎ.ಪಿ.ಎಮ್.ಸಿ.ಯಲ್ಲಿ ಮೋಟಾರ ಸೈಕಲಗಳನ್ನು ಕಳ್ಳತನ ಮಾಡಿರುವ 1) ಬೀರಪ್ಪ ತಂದೆ ಪ್ರಕಾಶ ಐನಾಪೂರೆ ವ॥ 22 ವರ್ಷ ಉ॥ ಅಟೋಚಾಲಕ ಜಾತಿ॥ ಕುರುಬುರ ಸಾ॥ ಮುಚಳಂಬಿ ತಾ॥ ಬಸವಕಲ್ಯಾಣ ಜಿ॥ ಬೀದರ ಹಾ॥ ವ॥ ಆಶ್ರಯ ಕಾಲನಿ ಲಾರಿ ತಂಗು ದಾಣ ಹತ್ತಿರ ಕಲಬುರಗಿ 2) ಸುನೀಲ ತಂದೆ ದೋಂಡಿಬಾ ಛತ್ರಿ ವ॥ 22 ವರ್ಷ ಉ॥ ಅಡುಗೆ ಕೆಲಸ ಜಾತಿ॥ ಮರಾಠ ಸಾ॥ ಮಣೂರ ತಾ॥ ಅಫಜಲಪೂರ ಹಾ॥ ವ॥ ಅಟೋ ನಗರ ಕಲಬುರಗಿ ಇವರನ್ನು ದಿನಾಂಕ 28.0.2022 ರಂದು ಹಿಡಿದು ಅವರಿಂದ ಒಟ್ಟು 6 ವಿವಿಧ ಕಂಪನಿಯ ಮೋಟಾರ ಸೈಕಲಗಳು ಅ.ಕಿ. 2,90,000/- ರೂಪಾಯಿ ಕಿಮ್ಮತ್ತಿನ ಮುದ್ದೆಮಾಲನ್ನು ಜಪ್ತಿ ಪಡಿಸಿಕೊಂಡು ಆರೋಪಿತರನ್ನು ನ್ಯಾಯಾಂಗ ಬಂಧನಕ್ಕೆ ಕಳುಹಿಸಿಕೊಡಲಾಗಿದೆ.

ಕಲಬುರಗಿ ನಗರದ ವಿವಿಧ ಕಡೆಗಳಲ್ಲಿ ಮೋಟಾರ ಸೈಕಲಗಳನ್ನು ಕಳ್ಳತನ ಮಾಡಿದ ಕಳ್ಳರನ್ನು ಬಂಧಿಸಿ ನ್ಯಾಯಾಂಗ ಬಂಧನಕ್ಕೆ ಕಳುಹಿಸಿಕೊಡುವಲ್ಲಿ ಯಶಸ್ವಿಯಾದ ಅಧಿಕಾರಿ ಮತ್ತು ಸಿಬ್ಬಂದಿಯವರ ಕಾರ್ಯಕ್ಕೆ ಮಾನ್ಯ ಪೊಲೀಸ್ ಆಯುಕ್ತರು, ಮಾನ್ಯ ಡಿ.ಸಿ.ಪಿ. (ಕಾ.ಸು.), ಮಾನ್ಯ ಡಿ.ಸಿ.ಪಿ. (ಅಪರಾಧ ಮತ್ತು ಸಂಚಾರ) ಹಾಗೂ ಮಾನ್ಯ ಎ.ಸಿ.ಪಿ. ಸಬ್ ಅರ್ಬನ್ ಉಪವಿಭಾಗ ಕಲಬುರಗಿ ನಗರ ರವರು ಮೆಚ್ಚುಗೆ ವ್ಯಕ್ತಪಡಿಸಿರುತ್ತಾರೆ.